# GOVERNMENT OF KARNATAKA

No. DPAR 153 SRR 2020

Karnataka Government Secretariat,
Vidhana Soudha,
Bangalore, Dated: 19.04.2022.

## NOTIFICATION

Whereas the draft of the Karnataka Civil Services (Probation) Rules, 1977, was published as required by clause (a) of sub-section (2) of section 3 read with section 8 of the Karnataka State Civil Services Act, 1978 (Karnataka Act 14 of 1990), in Notification No. DPAR 153 SRR 2020, dated 03.03.2022 in Part IV-A (No.94) of the Karnataka Gazette Extraordinary dated 3rd March 2022 inviting objections and suggestions from persons likely to be affected thereby within fifteen days from the date of publication of draft in the Official Gazette.

Whereas, the said Gazette was made available to the public on 3rd March 2022.

And, whereas no objections and suggestions have been received in this behalf by the State Government,

Now, therefore, in exercise of the powers conferred by sub-section (1) of section 3 read with section 8 of the Karnataka State Civil Services Act, 1978 (Karnataka Act 14 of 1990), the Government of Karnataka makes the following rules, namely:-

## RULES

**1. Title and Commencement:** (1) These rules may be called The Karnataka Civil Services (Probation) (Amendment) Rules, 2022.

(2) They shall come into force from the date of their final publication in the Official Gazette.

**2. Amendment of rule 5.-** In the Karnataka Civil Services (Probation) Rules, 1977, in rule 5, in sub-rule (2), the following proviso shall be inserted at the end, namely,-

"Provided that, if a Government servant who has ceased to be in service on or before the date of commencement of the Karnataka Civil Services (Probation) (Amendment) Rules, 2022 or ceases to be in service after the said date on account of retirement on attaining the age of superannuation before an order is issued by the Appointing Authority declaring satisfactory completion of the period of his Probation under clause (a) of sub-rule (1) or discharging him under clause (b) of sub-rule (1) or discharging him during the period of probation under rule 6, the period of his

probation shall be deemed to have been extended till the date of his retirement on attaining the age of superannuation, as the case may be, and it shall also be deemed to have been declared as satisfactorily completed as on that date for the purpose of pension only:

Provided further that, appointing authorities shall not delay in issuing orders with regard to declare satisfactory completion of period of probation by a probationer under clause (a) of sub-rule (1) or discharging him under clause (b) of sub-rule (1) or discharging him during the period of probation under rule 6, as the case may be. For this purpose, the Appointing Authorities shall regularly monitor pending cases where such orders are required to be issued and take timely action to issue the same.

Provided also that, no appointing authority shall make use of the provisions of first and second proviso as pre-instance after the date of commencement of the Karnataka Civil Services (Probation) (Amendment) Rules, 2022."

By Order and in the name of the
Governor of Karnataka,

(Veerabhadra)
Under Secretary to Government,
Department of Personnel & Administrative Reforms,
(Service Rules-1).

# ಕರ್ನಾಟಕ ಸರ್ಕಾರ

ಸಂಖ್ಯೆ:ಸಿಆಸುಇ 153 ಸೇನೆನಿ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:19.04.2022

## <u>ಅಧಿಸೂಚನೆ</u>

ಕರ್ನಾಟಕ ನಾಗರಿಕ ಸೇವಾ (ಪರಿವೀಕ್ಷಣೆ) ನಿಯಮಗಳು, 1977ಕ್ಕೆ ಮತ್ತಷ್ಟು ತಿದ್ದುಪಡಿ ಮಾಡಲು ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978 (1990ರ ಅಧಿನಿಯಮ ಸಂಖ್ಯೆ:14) ರ 3ನೇ ಪ್ರಕರಣದ 2(ಎ) ಉಪ ಪ್ರಕರಣವನ್ನು ಪ್ರಕರಣ 8 ರೊಂದಿಗೆ ಓದಿಕೊಂಡು ಅದರಲ್ಲಿ ಅಗತ್ಯಪಡಿಸಲಾದಂತೆ, ಕರಡು ನಿಯಮಗಳನ್ನು ದಿನಾಂಕ:03.03.2022ರ ರಾಜ್ಯ ಪತ್ರದ ವಿಶೇಷ ಸಂಚಿಕೆಯ ಭಾಗ IV-ಎ (ನಂ-94) ರಲ್ಲಿ ಅಧಿಸೂಚನೆ ಸಂಖ್ಯೆ: ಸಿಆಸುಇ 153 ಸೇನೆನಿ 2020, ದಿನಾಂಕ:03.03.2022 ರಲ್ಲಿ ಪ್ರಕಟಿಸಿ ಅದರಿಂದ ಭಾದಿತರಾಗಬಹುದಾದಂತಹ ವ್ಯಕ್ತಿಗಳಿಂದ ಅಧಿಕೃತ ರಾಜ್ಯಪತ್ರದಲ್ಲಿ ಆ ಕರಡು ನಿಯಮಗಳು ಪ್ರಕಟವಾದ ದಿನಾಂಕದಿಂದ 15 ದಿನಗಳ ಒಳಗಾಗಿ ಆಕ್ಷೇಪಣೆ ಮತ್ತು ಸಲಹೆಗಳನ್ನು ಆಹ್ವಾನಿಸಲಾಗಿರುವುದರಿಂದ,

ಸದರಿ ರಾಜ್ಯಪತ್ರವನ್ನು ದಿನಾಂಕ:3ನೇ ಮಾರ್ಚ್ 2022ರಂದು ಸಾರ್ವಜನಿಕರಿಗೆ ದೊರೆಯುವಂತೆ ಮಾಡಲಾಗಿರುವುದರಿಂದ,

ಮತ್ತು ಸದರಿ ಕರಡಿನ ಬಗ್ಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ರಾಜ್ಯ ಸರ್ಕಾರದಲ್ಲಿ ಸ್ವೀಕೃತವಾಗಿಲ್ಲದಿರುವುದರಿಂದ,

ಈಗ, ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978(1990ರ ಅಧಿನಿಯಮ ಸಂಖ್ಯೆ:14) ರ 3ನೇ ಪ್ರಕರಣದ 1ನೇ ಉಪ ಪ್ರಕರಣವನ್ನು 8ನೇ ಪ್ರಕರಣದೊಂದಿಗೆ ಓದಿಕೊಂಡಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಗಿನ ನಿಯಮಗಳನ್ನು ರಚಿಸುತ್ತದೆ, ಎಂದರೆ:-

## <u>ನಿಯಮಗಳು</u>

1. **<u>ಶೀರ್ಷಿಕೆ ಮತ್ತು ಪ್ರಾರಂಭ:-</u>** (1) ಈ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ (ಪರಿವೀಕ್ಷಣೆ) (ತಿದ್ದುಪಡಿ) ನಿಯಮಗಳು, 2022 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿ ಅಂತಿಮ ಪ್ರಕಟಣೆಯ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2**. **<u>ನಿಯಮ 5ಕ್ಕೆ ತಿದ್ದುಪಡಿ</u>:-** ಕರ್ನಾಟಕ ಸಿವಿಲ್ ಸೇವಾ (ಪರಿವೀಕ್ಷಣೆ) ನಿಯಮಗಳು, 1977ರ ನಿಯಮ 5ರ ಉಪ ನಿಯಮ 2ರ ಕೊನೆಯಲ್ಲಿ ಕೆಳಗಿನ ಪರಂತುಕವನ್ನು ಸೇರಿಸತಕ್ಕದ್ದು,-

"ಪರಂತು, ಸಂದರ್ಭಾನುಸಾರ, ನೇಮಕಾತಿ ಪ್ರಾಧಿಕಾರವು ಉಪ-ನಿಯಮ (1)ರ ಪ್ರಕರಣ (ಎ) ರನ್ವಯ ಪರಿವೀಕ್ಷಣೆ ಅವಧಿಯನ್ನು ತೃಪ್ತಿಕರವೆಂದು ಘೋಷಿಸುವ ಅಥವಾ ಉಪ-ನಿಯಮ (1)ರ

ಪ್ರಕರಣ (ಬಿ) ರನ್ವಯ ಸೇವೆಯಿಂದ ತೆಗೆದುಹಾಕುವ ಅಥವಾ ನಿಯಮ (6)ರನ್ವಯ ಪರಿವೀಕ್ಷಣಾವಧಿಯಲ್ಲಿರುವಾಗಲೇ ಸೇವೆಯಿಂದ ಬಿಡುಗಡೆ ಮಾಡುವ ಆದೇಶವನ್ನು ಹೊರಡಿಸುವ ಮೊದಲೇ ಸರ್ಕಾರಿ ನೌಕರನು ವಯೋನಿವೃತ್ತಿ ವಯಸ್ಸನ್ನು ತಲುಪಿದ ಕಾರಣ ಕರ್ನಾಟಕ ಸಿವಿಲ್ ಸೇವಾ (ಪರಿವೀಕ್ಷಣೆ) (ತಿದ್ದುಪಡಿ) ನಿಯಮಗಳು, 2022 ಜಾರಿಯಾಗುವ ದಿನಾಂಕದಂದು ಅಥವಾ ಮೊದಲು ಅಥವಾ ಜಾರಿಗೊಂಡ ನಂತರ ವೋನಿವೃತ್ತಿ ಹೊಂದಿ ಸೇವೆಯಿಂದ ಸ್ಥಗಿತಗೊಂಡಿದ್ದಲ್ಲಿ, ಕೇವಲ ಪಿಂಚಣಿಯ ಉದ್ದೇಶಕ್ಕಾಗಿ ಆತನ ಪರಿವೀಕ್ಷಣಾವಧಿಯನ್ನು ಆತನ ವಯೋನಿವೃತ್ತಿಯ ದಿನಾಂಕದವರೆಗೂ ವಿಸ್ತರಿಸಲಾಗಿದೆ ಮತ್ತು ಆ ದಿನಾಂಕದಂದು ತೃಪ್ತಿಕರವಾಗಿ ಪೂರೈಸಲಾಗಿದೆ ಎಂದು ಘೋಷಿಸಲಾಗಿದೆ ಎಂದು ಪರಿಭಾವಿಸತಕ್ಕದ್ದು.

ಮತ್ತೂ ಪರಂತು, ಸಂದರ್ಭಾನುಸಾರ, ನೇಮಕಾತಿ ಪ್ರಾಧಿಕಾರಗಳು ಉಪ-ನಿಯಮ (1)ರ ಪ್ರಕರಣ (ಎ) ರನ್ವಯ ಪರೀಕ್ಷಾರ್ಥಿಯ ಪರಿವೀಕ್ಷಣೆ ಅವಧಿಯನ್ನು ತೃಪ್ತಿಕರವೆಂದು ಘೋಷಿಸುವ ಅಥವಾ ಉಪ-ನಿಯಮ (1)ರ ಪ್ರಕರಣ (ಬಿ) ರನ್ವಯ ಆತನನ್ನು ಸೇವೆಯಿಂದ ತೆಗೆದುಹಾಕುವ ಅಥವಾ ನಿಯಮ (6)ರನ್ವಯ ಪರಿವೀಕ್ಷಣಾವಧಿಯಲ್ಲಿರುವಾಗಲೇ ಆತನನ್ನು ಸೇವೆಯಿಂದ ಬಿಡುಗಡೆ ಮಾಡುವ ಆದೇಶವನ್ನು ಹೊರಡಿಸುವ ಆದೇಶಗಳನ್ನು ಹೊರಡಿಸುವಲ್ಲಿ ವಿಳಂಬ ಮಾಡತಕ್ಕದ್ದಲ್ಲ. ಈ ಉದ್ದೇಶಕ್ಕಾಗಿ ನೇಮಕಾತಿ ಪ್ರಾಧಿಕಾರಗಳು ಅಂತಹ ಆದೇಶಗಳನ್ನು ಹೊರಡಿಸಲು ಬಾಕಿ ಇರುವ ಪ್ರಕರಣಗಳನ್ನು ಬಿಯಮಿತವಾಗಿ ಮೇಲ್ವಿಚಾರಣೆ ಮಾಡತಕ್ಕದ್ದು ಹಾಗೂ ಅವುಗಳನ್ನು ಕಾಲಮಿತಿಯಲ್ಲಿ ಹೊರಡಿಸಲು ಕ್ರಮವಹಿಸತಕ್ಕದ್ದು.

ಮತ್ತೂ ಪರಂತು, ಕರ್ನಾಟಕ ನಾಗರಿಕ ಸೇವಾ (ಪರಿವೀಕ್ಷಣೆ) (ತಿದ್ದುಪಡಿ) ನಿಯಮಗಳು, .2022 ಪ್ರಾರಂಭವಾದ ದಿನಾಂಕದ ನಂತರ ನೇಮಕಾತಿ ಪ್ರಾಧಿಕಾರವು ಮೊದಲನೆಯ ಮತ್ತು ಎರಡನೆಯ ಪರಂತುಕದಲ್ಲಿನ ಆಸ್ಪದಗಳನ್ನು ಪೂರ್ವ ನಿದರ್ಶನವಾಗಿ ಬಳಸತಕ್ಕದ್ದಲ್ಲ."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ವೀರಭದ್ರು)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು-1)